


ನಾರಾಯಣ ಆಸ್ಪತ್ರೆಯ ಹೃದಯ ತಜ್ಞರಾದ ಡಾ.ಶಶಿರಾಜ್ ಹಾಗೂ ಡಾ.ಜ್ಯೂಲಿಯಸ್ ಪುನ್ನೆನ್ ಹೃದಯ ಕಸಿ ಮಾಡಿಸಿಕೊಂಡ ಬಾಲಕ ಹಾಗೂ ಆತನ ಪೋಷಕರೊಂದಿಗೆ.

## ಕಾರ್ಡಿಯೊ ಮಯೋಪತಿ

# ನಾಲ್ಕರ ಪೋರನಿಗೆ ಹೃದಯ ಕಸಿ

**ಮಕ್ಕಳಲ್ಲಿ ಇತ್ತೀಚೆಗೆ ವಂಶವಾಹಿ ತೊಂದರೆಯಿಂದ ಹೃದ್ರೋಗ ಸಮಸ್ಯೆ ಹೆಚ್ಚುತ್ತಿದೆ. ಹೃದಯದಲ್ಲಿನ ರಕ್ತನಾಳಗಳಲ್ಲಿ ತೊಂದರೆ ಉಂಟಾಗಿ ಬರುವ ಕಾರ್ಡಿಯೊ ಮಯೋಪತಿ ಎಂಬ ಸಮಸ್ಯೆಯೂ ಮಕ್ಕಳಲ್ಲೇ ಕಂಡುಬರುತ್ತಿದೆ. ಇಂತಹ ಹೃದ್ರೋಗ ಸಮಸ್ಯೆಗೆ ಹೃದಯ ಕಸಿ ಶಸ್ತ್ರಚಿಕಿತ್ಸೆ ಒಂದೇ ದಾರಿ.**

■ **ಉಮಾ ಅನಂತ್**

ಕೋಲ್ಕತ್ತಾ ಮೂಲದ ನಾಲ್ಕು ವರ್ಷದ ಬಾಲಕ ಚಹಲ್ ಪಟ್ವಾರಿ ಕಾರ್ಡಿಯೊ ಮಯೋಪತಿ ಸಮಸ್ಯೆಯಿಂದ ಬಳಲುತ್ತಿದ್ದ. ಎರಡು ವರ್ಷಗಳ ಹಿಂದೆ ಈತನಿಗೆ ಹೃದಯ ಸಮಸ್ಯೆ ಪತ್ತೆಯಾಗಿ ಚಿಕಿತ್ಸೆ ಪಡೆಯುತ್ತಲೇ ಇದ್ದ. ಆದರೆ ದಿನೇದಿನೇ ಆರೋಗ್ಯ ಕ್ಷೀಣಿಸುತ್ತಲೇ ಇತ್ತು. ಅಲ್ಲದೆ ಈ ಪುಟಾಣಿಯ ಹೃದಯ ರಕ್ತವನ್ನು ಪಂಪ್ ಮಾಡುವ ಸಾಮರ್ಥ್ಯವನ್ನೂ ಕುಗ್ಗಿಸುವಂತೆ ಮಾಡಿತ್ತು. ಇದರಿಂದ ಆತಂಕಗೊಂಡ ಪೋಷಕರು ಮಗುವನ್ನು ಬೆಂಗಳೂರಿನ ನಾರಾಯಣ ಹೆಲ್ತ್‌ಸಿಟಿಗೆ ಚಿಕಿತ್ಸೆಗಾಗಿ ಕರೆತಂದರು. ಮಗು ಕೊನೆಯ ಹಂತದ ಹೃದ್ರೋಗ ಸಮಸ್ಯೆಯಿಂದ ಬಳಲುತ್ತಿದ್ದುದು ವಿವಿಧ ಪರೀಕ್ಷೆಗಳಿಂದ ಪತ್ತೆಯಾಯಿತು ಅಲ್ಲದೆ ಮಗುವಿನ ಪ್ರಾಣ ಉಳಿಸುವುದು ವೈದ್ಯರಿಗೆ ಕಠಿಣ ಸವಾಲೂ ಆಗಿತ್ತು. ಈ ಬಾಲಕನಿಗೆ ಹೃದಯ ಕಸಿ ಒಂದೇ ದಾರಿ ಎಂಬ ಅಂತಿಮ ತೀರ್ಮಾನಕ್ಕೂ ವೈದ್ಯತಂಡ ಬಂದಿತ್ತು.

ಆಸ್ಪತ್ರೆಗೆ ದಾಖಲಿಸಿಕೊಂಡು 'ಜೀವ ಸಾರ್ಥಕತೆ' ಸಂಘಟನೆಯಲ್ಲಿ ಹೃದಯಕ್ಕಾಗಿ ನೋಂದಾಯಿಸಿಕೊಂಡರು. ಸುಮಾರು ಹನ್ನೊಂದು ತಿಂಗಳುಗಳ ಕಾಲ ಚಿಕಿತ್ಸೆ ನೀಡುತ್ತಲೇ ದಾನಿಗಳಿಂದ ಮಗುವಿಗೆ ಹೃದಯ ಪಡೆಯುವುದಕ್ಕಾಗಿ ಕಾದ ವೈದ್ಯರು ಕೊನೆಗೂ ದಾನಿಯೊಬ್ಬರಿಂದ ಕಳೆದ ತಿಂಗಳು ಹೃದಯ ಪಡೆದು ಮಗುವಿಗೆ ಹೃದಯ ಕಸಿ ಮಾಡಿದರು. ಶಸ್ತ್ರಚಿಕಿತ್ಸೆಯ ಬಳಿಕ 15 ದಿನಗಳ ಕಾಲ ಆಸ್ಪತ್ರೆಯಲ್ಲೇ ಇದ್ದ ಮಗು ಈಗ ಸಂಪೂರ್ಣವಾಗಿ ಚೇತರಿಸಿಕೊಂಡಿದೆ. ಇಲ್ಲಿಗೆ ನಮ್ಮ ರಾಜ್ಯದಲ್ಲೇ ಅತ್ಯಂತ ಕಡಿಮೆ ವಯಸ್ಸಿನ ಮಗುವಿಗೆ ಹೃದಯ ಕಸಿ ಮಾಡಿದ ದಾಖಲೆಗೂ ಈ ಆಸ್ಪತ್ರೆ ಪಾತ್ರವಾಯಿತು.

'ಕಾರ್ಡಿಯೊ ಮಯೋಪತಿ ಸಮಸ್ಯೆಗೆ ಹೃದಯ ಕಸಿ (ಹಾರ್ಟ್ ಟ್ರಾನ್ಸ್‌ಪ್ಲಾಂಟ್) ಒಂದೇ